ಶಾಂತವೀರಪ್ಪಗೌಡರ ಮನೆಯಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ದೊಕಾಚಿ ಮೇಷ್ಟ್ರ ಘನಗಂಭೀರ ಮೌನ ಅಲ್ಲಿದ್ದ ಯಾರ ಮೇಲೂ ಅಷ್ಟೊಂದು ವಿಶೇಷ ಪರಿಣಾಮ ಬೀರದೆ ಹೋದರೂ ಗೌಡರ ಮಗಳು ಶಾಂತಿಲಕ್ಷ್ಮಿಯ ಎದೆಯಲ್ಲಿ ಮಾತ್ರ ಅಚ್ಚಳಿಯದ ಮುದ್ರೆಯಾಗಿ ಠಳಾಯಿಸಿಬಿಟ್ಟಿತು. ಈ ಶಾಂತಿಲಕ್ಷ್ಮಿ ಶಾಂತವೀರಪ್ಪಗೌಡರ ನಾಲ್ಕು ಗಂಡು ಮಕ್ಕಳ ನಂತರ ಹುಟ್ಟಿದ ಏಕಮಾತ್ರ ಹೆಣ್ಣು ಸಂತಾನ. ಊರಿನ ಮಠದ ಶಾಲೆಯಲ್ಲಿ ಮ್ಯಾಟ್ರಿಕ್‌ವರೆಗೆ ಓದಿದ ಶಾಂತಿಲಕ್ಷ್ಮಿ ಮುಂದೆ ಕಾಲೇಜು ಸೇರಲು ಪಟ್ಟಣಕ್ಕೆ ಹೋಗುತ್ತೆನೆಂದು ಹಟ ಹಿಡಿದಾಗ ಶಾಂತವೀರಪ್ಪಗೌಡರು ಹೌಹಾರಿದ್ದರು. ದಿನದಿನಕ್ಕೂ ವಯಸ್ಸನ್ನು ಮೀರಿ ಬೆಳೆಯುತ್ತಿರುವ ಮಗಳ ದೇಹ ಗೌಡರ ಆತಂಕಕ್ಕೆ ಕಾರಣವಾಗಿತ್ತು. ಶಾಂತಿಲಕ್ಷ್ಮಿ ಒಳ್ಳೆ ಸ್ಫುರದ್ರೂಪಿ ಹೆಣ್ಣು. ಬೆಳದಿಂಗಳ ಬಣ್ಣದ ದೇಹ ಕಾಂತಿ, ಒತ್ತಾದ ಕಪ್ಪು ತಲೆಗೂದಲು, ತಿದ್ದಿ ತೀಡಿದ ಹುಬ್ಬು, ವಿಶಾಲ ನೇತ್ರಗಳು, ನೀಳ ಮೂಗು, ತುಂಬಿದೆದೆ, ಸಣ್ಣ ನಡು, ಬಾಳೆದಿಂಡಿನಂತಹ ಕಾಲುಗಳ ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನ್ನುವಷ್ಟು ರೂಪವತಿ. ದಾರಿಯಲ್ಲಿ ಅವಳು ನಡೆದು ಹೋಗುತ್ತಿದ್ದರೆ ಅವಳೆದೆಯ ಕುಲುಕಾಟಕ್ಕೆ ಯುವಕರಿರಲಿ ವಯಸ್ಸಾದವರ ಎದೆ ಕೂಡ ಝಲ್ ಎನ್ನುತ್ತಿತ್ತು. ಊರಿನ ಅದೆಷ್ಟೋ ಪಡ್ಡೆ ಹುಡುಗರು ಶಾಂತಿಲಕ್ಷ್ಮಿಯ ನೆನಪಲ್ಲಿ ರಾತ್ರಿಯೆಲ್ಲ ತಮ್ಮ ಮೈ ಬಿಸಿಯಾಗಿಸಿಕೊಂಡು ರೋಮಾಂಚನಗೊಳ್ಳುತ್ತಿದ್ದರು. ರೂಪವತಿಯಾದ ಮಗಳನ್ನು ದೂರದ ಊರಿನಲ್ಲಿಟ್ಟು ಕಾಲೇಜಿಗೆ ಸೇರಿಸುವುದು ಗೌಡರಿಗೆ ಸುತಾರಾಂ ಇಷ್ಟವಿರಲಿಲ್ಲ. ಶಾಂತಿಲಕ್ಷ್ಮಿ ಕೆಲವು ದಿನ ಅನ್ನ ನೀರು ಬಿಟ್ಟು ಮುಷ್ಕರ ಹೂಡಿದಳಾದರೂ ಕೊನೆಗೆ ಮನೆಯವರೆಲ್ಲರ ಪ್ರತಿರೋಧಕ್ಕೆ ಮಣಿದು ಕ್ರಮೇಣ ಬದಲಾದ ಈ ಜೀವನಗತಿಗೆ ಹೊಂದಿಕೊಂಡಳು. ದಿನದ ಬಹುಪಾಲು ವೇಳೆಯನ್ನು ಟೀವಿ ನೋಡುವುದು, ಇಲ್ಲವೆ ಕತೆ ಕಾದಂಬರಿಗಳ ಓದಿನಲ್ಲಿ ಕಳೆಯುತ್ತಿದ್ದ ಶಾಂತಿಲಕ್ಷ್ಮಿಗೆ ವಯೋಸಹಜವಾಗಿ ಪ್ರೀತಿ ಪ್ರಣಯದ ಸಿನಿಮಾ, ಕತೆ, ಕಾದಂಬರಿಗಳು ಇಷ್ಟವಾಗತೊಡಗಿದವು. ಸಿನಿಮಾ ಮತ್ತು ಕಾದಂಬರಿಗಳ ನಾಯಕರಲ್ಲಿ ತನ್ನ ಕನಸಿನ ರಾಜಕುಮಾರನನ್ನು ಹುಡುಕುತ್ತಿದ್ದ ಶಾಂತಿಲಕ್ಷ್ಮಿಗೆ ಮನೆಯಲ್ಲಿ ಸಭೆ ಸೇರಿದ ದಿನದಿಂದ ದೊಕಾಚಿ ಮೇಷ್ಟ್ರ ಚಿತ್ರ ಕಣ್ಣೊಳಗೆ ಕುಳಿತು ಅವಳೆದೆಯಲ್ಲಿ ಪ್ರೇಮಗೀತೆ ಪಲ್ಲವಿಸತೊಡಗಿತು. ಡಾಂಬರು ಬಣ್ಣದ, ಬೋಳು ಬೋಳಾದ ತಲೆಯ, ಕಡ್ಡಿಪೈಲ್ವಾನನಂತಿರುವ ಈ ಮೇಷ್ಟ್ರು ಅನಾಮತ್ತು ನಲವತ್ತಾರು ಕಿಲೋ ತೂಕದ ದೇಹದೊಂದಿಗೆ ತನ್ನ ಹೃದಯದಲ್ಲಿ ಪ್ರತಿಷ್ಠಾಪನೆಗೊಂಡಿದ್ದು ಸ್ವತಃ ಶಾಂತಿಲಕ್ಷ್ಮಿಗೂ ಸೋಜಿಗದ ವಿಷಯವಾಗಿತ್ತು.

ಮಠದ ಶಾಲೆಯಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಆಗಾಗ ಪಾಲ್ಗೊಳ್ಳುತ್ತಿದ್ದ ಶಾಂತಿಲಕ್ಷ್ಮಿಗೆ ದೊಕಾಚಿ ಮೇಷ್ಟ್ರನ್ನು ಸುಲಭವಾಗಿ ಸಂಧಿಸಲು ಯಾವ ಅಡೆತಡೆಯೂ ಇರಲಿಲ್ಲ. ಬೇರೆ ವಿಚಾರಗಳಲ್ಲಿ ಮೇಷ್ಟ್ರು ಎಡವಟ್ಟು ಎಂದೆನಿಸಿದರೂ ಹೆಣ್ಣಿನ ವಿಷಯದಲ್ಲಿ ತುಂಬ ಸ್ಟ್ರಿಕ್ಟ್ ಎಂಬ ನಂಬಿಕೆ ಗೌಡರಿಗಿದ್ದುದ್ದರಿಂದಲೇ ಶಾಂತಿಲಕ್ಷ್ಮಿ ಮತ್ತು ಮೇಷ್ಟ್ರ ಭೇಟಿ ವಿಷಯದಲ್ಲಿ ಅವರು ಹೆಚ್ಚು ತಲೆಕೆಡಿಸಿಕೊಂಡಿರಲಿಲ್ಲ. ಅದುವರೆಗೂ ಬಡ ಮತ್ತು ಕೆಳವರ್ಗದ ಜನರಷ್ಟೇ ತಮ್ಮ ವೈಚಾರಿಕ ಕ್ರಾಂತಿಯ ವಾರಸುದಾರರು ಎಂದು ಭಾವಿಸಿದ್ದ ದೊಕಾಚಿ ಮೇಷ್ಟ್ರು ಶಾಂತಿಲಕ್ಷ್ಮಿಯ ಜೊತೆಗಿನ ಒಡನಾಟದಿಂದ ತಮ್ಮ ವೈಚಾರಿಕ ಕ್ರಾಂತಿಗೆ ಹೊಸ ನೆಲೆ ದೊರೆತ ಖುಷಿಯಿಂದ ಪುಳಕಿತರಾಗಿ ಅವಳಿಗೆ ಕುವೆಂಪು, ಕಾರಂತ, ಲಂಕೇಶ್, ತೇಜಸ್ವಿ, ಅನಂತಮೂರ್ತಿ, ದೇವನೂರರ ಪುಸ್ತಕಗಳನ್ನೆಲ್ಲ ಓದುವಂತೆ ಶಿಫಾರಸ್ಸು ಮಾಡಿದ್ದಲ್ಲದೆ ತಮ್ಮಲ್ಲಿದ್ದ ಒಂದೆರಡು ಪುಸ್ತಕಗಳನ್ನು ಓದಲು ಕೊಟ್ಟು ರೋಮಾಂಚನಗೊಂಡರು. ಆರಂಭದಲ್ಲಿ ಉತ್ಸಾಹ ತೋರಿದ ಶಾಂತಿಲಕ್ಷ್ಮಿ ಬರಬರುತ್ತ ಮೇಷ್ಟ್ರ ವೈಚಾರಿಕ ಕ್ರಾಂತಿಯ ವಿಚಾರಗಳಿಗೆ ರೋಸಿ ಅವರ ದಡ್ಡ ತಲೆಗೆ ನಿಜವಾದ ಅರ್ಥ ಹೊಳೆಯುತ್ತಿಲ್ಲವೆಂದು ಗೊತ್ತಾದದ್ದೆ ಆಪರೇಷನ್ ಲವ್ ಕಾರ್ಯಾಚರಣೆಗೆಂದು ಖುದ್ದು ಅಖಾಡಕ್ಕಿಳಿದಳು. ಚಿಕ್ಕಪ್ಪನ ಮಗ ಗುರುಲಿಂಗನ ಮೂಲಕ ಪುಸ್ತಕದಲ್ಲಿ ಪ್ರೇಮ ಪತ್ರವನ್ನು ಬಚ್ಚಿಟ್ಟು